ರಾಜ್ಯದಲ್ಲಿ ರೇಷ್ಮೆ ಬೆಳೆಗಾರರಿಗೆ ನೀಡಿರುವ ಸಾಲ

528 - ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ರೇಷ್ಮೆ, ಕೃಷಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕದಲ್ಲಿ ಒಟ್ಟು ಎಷ್ಟು ರೇಷ್ಮೆ ಬೆಳೆಗಾರರಿದ್ದಾರೆ?

ಆ) ರೇಷ್ಮೆ ಬೆಳೆ ಬೆಳೆಯಲು ಬೆಳೆಗಾರರಿಗೆ ಕೊಟ್ಟಿರುವ ಒಟ್ಟು ಸಾಲದ ಮೊತ್ತವೆಷ್ಟು?

ಶ್ರೀ ಡಿ. ನಾಗರಾಜಯ್ಯ (ರಾಜ್ಯ ಕೃಷಿ ಸಚಿವರು) :

ಅ) 3,16,531 ಬೆಳೆಗಾರರಿದ್ದಾರೆ

ಆ) ರೂ. 47.57 ಕೋಟಿ (1989-90ನೇ ಸಾಲಿನಿಂದ 1994-95ನೇ ಸಾಲಿನ ಫೆಬ್ರವರಿ 95ರ ಅಂತ್ಯದವರೆಗೆ)

ತಾಲ್ಲೂಕು ಹಾಗೂ ಹೋಬಳಿ ಮಟ್ಟದಲ್ಲಿ ಸಣ್ಣ ಕೈಗಾರಿಕೆಗಳ ಸ್ಥಾಪನೆ

527 - ಶ್ರೀ ಕೆ.ಎನ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೈಗಾರಿಕೆಗಳನ್ನು ತಾಲ್ಲೂಕು ಹಾಗೂ ಹೋಬಳಿ ಮಟ್ಟದಲ್ಲಿ ಸಣ್ಣ ಕೈಗಾರಿಕೆಗಳನ್ನು ಮಾಡುವ ಆಲೋಚನೆಯಿದೆಯೇ?

ಆ) ರೈತರ ಭೂಮಿಯಿಂದ ಬೆಳೆದ ಕಚ್ಚಾ ವಸ್ತುಗಳನ್ನು ಕನಿಷ್ಠ ಸಿದ್ಧವಸ್ತುಗಳನ್ನಾಗಿ ಮಾಡುವ ಕೈಗಾರಿಕೆ ಬಗ್ಗೆ ಸರ್ಕಾರದವರು ಆಲೋಚಿಸುವರೇ?

ಶ್ರೀ ಎಸ್.ಎಂ. ನಬೀ (ಸಣ್ಣ ಕೈಗಾರಿಕಾ ಸಚಿವರು) :

ಅ) ತಾಲ್ಲೂಕು ಮತ್ತು ಹೋಬಳಿ ಮಟ್ಟದಲ್ಲಿ ಸಣ್ಣ ಕೈಗಾರಿಕೆಗಳ ಸ್ಥಾಪನೆಯನ್ನು ಉತ್ತೇಜಿಸುವ ಸಲುವಾಗಿ ಸಣ್ಣ ಕೈಗಾರಿಕೆ ಮತ್ತು ಅತೀ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲು ಮುಂದೆ ಬರುವ ಕೈಗಾರಿಕೋದ್ಯಮಿಗಳಿಗೆ ಬೆಂಗಳೂರು ಉತ್ತರ ಮತ್ತು ದಕ್ಷಿಣ ತಾಲ್ಲೂಕುಗಳನ್ನು ಹೊರತುಪಡಿಸಿ ಉಳಿದ 173 ತಾಲ್ಲೂಕುಗಳಲ್ಲಿ ಸಹಾಯಧನ ಮತ್ತು ರಿಯಾಯಿತಿಗಳನ್ನು ಸಹಾಯಧನ ಮತ್ತು ರಿಯಾಯಿತಿಗಳನ್ನು (ಶೇಕಡ 25 ರಷ್ಟು ಸಹಾಯಧನ ಮತ್ತು ಇತರೆ ರಿಯಾಯಿತಿಗಳು) ರಾಜ್ಯದಲ್ಲಿ ಸರ್ಕಾರವು ನೀಡುತ್ತಿದೆ.

ಆ) ಕೃಷಿ ಆಧಾರಿತ ಸಣ್ಣ ಪ್ರಮಾಣದ ಕೈಗಾರಿಕೆ ಮತ್ತು ಅತಿ ಸಣ್ಣ ಕೈಗಾರಿಕೆಗಳನ್ನು ಉತ್ತೇಜಿಸುವ ಸಲುವಾಗಿ ರಾಜ್ಯದಲ್ಲಿ ಹೊಸ ಕೈಗಾರಿಕಾ ನೀತಿಯನ್ವಯ ಕೃಷಿ ಆಧಾರಿತ ಕೈಗಾರಿಕೆಗಳನ್ನು ವಿಶೇಷ ವರ್ಗದಲ್ಲಿ ಸೇರಿಸಲಾಗಿದೆ. ಇದರನ್ವಯ ಇತರೆ ಕೈಗಾರಿಕೆಗಳಿಗೆ ನೀಡುವ ಸಹಾಯಧನ ಮತ್ತು ಸವಲತ್ತುಗಳೊಂದಿಗೆ ಶೇಕಡ 5ರಷ್ಟು ಸಹಾಯಧನವನ್ನು ರೂ. 5.00 ಲಕ್ಷಗಳಿಗೆ ಮೀರದಂತೆ ಸರ್ಕಾರವು ನೀಡುತ್ತಿದೆ.

ರಾಜ್ಯದಲ್ಲಿ ಕೈಗಾರಿಕೆ ಸ್ಥಾಪಿಸಲು ಬಂದಿರುವ ವಿದೇಶಿ ಕಂಪೆನಿಗಳು

517 - ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕೈಗಾರಿಕೆ ಸ್ಥಾಪಿಸಲು ಬಂದಿರುವ ವಿದೇಶಿ ಕಂಪನಿಗಳ ಸಂಖ್ಯೆ ಎಷ್ಟು ಹಾಗೂ ಅವರು ಹೂಡುತ್ತಿರುವ ಬಂಡವಾಳವೆಷ್ಟು?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು):